# ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1269
ಸದಸ್ಯರ ಹೆಸರು : ಶ್ರೀ.ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 21.12.2018
ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಹಾಸನ ಹಾಲು ಒಕ್ಕೂಟ ವ್ಯಾಪ್ತಿಯ ಚಿಕ್ಕಮಗಳೂರು ತಾಲ್ಲೂಕಿನ ಕೆಲ ಸೊಸೈಟಿಗಳಿಂದ ನಕಲಿ ಹಾಲು ಸರಬರಾಜು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈವರೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು) | ಹಾಸನ ಹಾಲು ಒಕ್ಕೂಟ ವ್ಯಾಪ್ತಿಯ ಚಿಕ್ಕಮಗಳೂರು ತಾಲ್ಲೂಕಿನ ಕುರುಬರಹಳ್ಳಿ, ಮಾಚೇನಹಳ್ಳಿ, ಕೆ.ಬಿ ಹಾಳ್, ನರಸೀಪುರ ಹಾಗೂ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಮಲ್ಲದೇವಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಹಾಸನ ಹಾಲು ಒಕ್ಕೂಟದ ಅರಸೀಕೆರೆ ಶೀಥಲೀಕರಣ ಕೇಂದ್ರಕ್ಕೆ ಹಾಲು ಸರಬರಾಜು ಮಾಡುತ್ತಿದ್ದು, ಮಾರ್ಚ್ 2018 ರಲ್ಲಿ ಮಿಲ್ಕೋ ಸ್ಕ್ರೀನ್ ಯಂತ್ರದ ಮುಖಾಂತರ ಒಕ್ಕೂಟದ ಅಧಿಕಾರಿಗಳು ಹಾಲನ್ನು ಪರೀಕ್ಷಿಸಿದ ಸಂದರ್ಭದಲ್ಲಿ ಸದರಿ ಸಂಘಗಳಿಂದ ಸರಬರಾಜು ಮಾಡಿದ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದಿರುವುದಾಗಿ ಒಕ್ಕೂಟದಿಂದ ವರದಿಯಾಗಿರುತ್ತದೆ.<br>ಕಲಬೆರಕೆ ಹಾಲು ಸರಬರಾಜು ಮಾಡಿದ ಸಂಘಗಳ ಕಾರ್ಯದರ್ಶಿಗಳು ಹಾಗೂ ಸಂಬಂಧಿಸಿದವರ ಮೇಲೆ ಹಾಸನ ಹಾಲು ಒಕ್ಕೂಟದಿಂದ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿರುತ್ತದೆ.<br>ಸದರಿ ಸಂಘಗಳಲ್ಲಿ 2014-15 ನೇ ಸಾಲಿನಿಂದ 2017-18 ನೇ ಸಾಲಿನವರೆಗೆ ಹಾಲು ಸರಬರಾಜಿನಲ್ಲಿ ನಡೆದಿರಬಹುದಾದ ಅವ್ಯವಹಾರದ ಬಗ್ಗೆ ಪರಿವೀಕ್ಷಣೆ ನಡೆಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರ ಅನ್ವಯ ಆದೇಶಿಸಲಾಗಿರುತ್ತದೆ. |
| ಆ) | ಈ ದಂಧೆಯು 5 ವರ್ಷಗಳಿಂದಲೂ ನಡೆಯುತ್ತಿದ್ದು, ಇಷ್ಟು ದೀರ್ಘ ಅವಧಿಯವರೆಗೆ ಪ್ರಕರಣ ಬೆಳಕಿಗೆ ಬಂದಿಲ್ಲದೆ, ಹಲವಾರು ಸೊಸೈಟಿ / ಅಧಿಕಾರಿಗಳು ಅದರಲ್ಲಿ ಶಾಮೀಲಾಗಿದ್ದು ಅವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ; ಇಂತಹ ಪ್ರಕರಣಗಳಲ್ಲಿ ಆದಂತಹ ನಷ್ಟವನ್ನು ಹೇಗೆ | ಕಲಬೆರಕೆ ಹಾಲು ಸರಬರಾಜು ಮಾಡಿರುವ ಬಗ್ಗೆ ಪೂರ್ಣ ಪ್ರಮಾಣದ ಪರಿಶೀಲನೆಗಾಗಿ 2014-15 ರಿಂದ 2017-18 ರ ಅವಧಿಯವರೆಗೆ ಉತ್ತರ 'ಅ' ನಲ್ಲಿ ಹೇಳಿದಂತೆ ಪರಿವೀಕ್ಷಣೆಗೆ ಆದೇಶಿಲಾಗಿರುತ್ತದೆ.<br>ಕಲಬೆರಕೆ ಹಾಲು ಸರಬರಾಜು ಮಾಡಲು ಸಹಕರಿಸಿದ್ದರೆಂಬ ಆರೋಪದ ಮೇಲೆ ಹಾಸನ ಸಹಕಾರಿ ಹಾಲು ಒಕ್ಕೂಟಕ್ಕೆ ಸಂಬಂಧಿಸಿದ 12 ಸಿಬ್ಬಂದಿಗಳನ್ನು ಹಾಸನ ಹಾಲು ಒಕ್ಕೂಟದಿಂದ |

| | | |
|---|---|---|
| | ಭರಿಸಲಾಗುವುದು. (ಮಾಹಿತಿಯನ್ನು ನೀಡುವುದು) | ಅಮಾನತ್ತು ಮಾಡಲಾಗಿರುತ್ತದೆ ಹಾಗೂ ಈ ಸಂಬಂಧ 4 ಜನ ಸಿಬ್ಬಂದಿಗಳ ಮೇಲೆ ಹಾಸನ ಹಾಲು ಒಕ್ಕೂಟದಿಂದ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿರುತ್ತದೆ.<br>ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಅವ್ಯವಹಾರದ ಕುರಿತು ಪರಿವೀಕ್ಷಣೆಗೆ ಆದೇಶವಾಗಿರುವುದರಿಂದ, ಪರಿವೀಕ್ಷಣಾ ವರದಿ ಬಂದ ನಂತರ ನಷ್ಟದ ಬಗ್ಗೆ ಸೂಕ್ತ ಕ್ರಮವಿಡಲಾಗುವುದು. |
| ಇ) | ಹಾಲು ದಿನನಿತ್ಯದ ಅತೀ ಅವಶ್ಯ ಬೇಡಿಕೆಗಳಲ್ಲಿ ಒಂದಾಗಿದ್ದು, ಕಠಿಣ ಕಾನೂನು ರೂಪಿಸಲು ಸರ್ಕಾರ ಕ್ರಮ ವಹಿಸುವುದೇ; ಇಂತಹ ಪ್ರಕರಣಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವ ಮತ್ತು ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು) | ಭಾರತ ಸರ್ಕಾರದ ಆಹಾರ ಸುರಕ್ಷತಾ ಕಾಯ್ದೆ 2011 ರನ್ವಯ ಹಾಲು ಮತ್ತು ಹಾಲಿನ ಉತ್ಪನ್ನಗಳ ಕಲಬೆರಕೆಗೆ ಕಠಿಣ ಮಾನದಂಡಗಳನ್ನು ರೂಪಿಸಲಾಗಿರುತ್ತದೆ.<br>ಹಾಲಿನ ಗುಣಮಟ್ಟ ಪರೀಕ್ಷೆಗಾಗಿ ಎಲ್ಲಾ ಹಾಲು ಸ್ವೀಕರಣಾ ಕೇಂದ್ರಗಳಲ್ಲಿ Adulteration detection kit ಮತ್ತು Milko screen ಪರೀಕ್ಷಾ ಯಂತ್ರಗಳನ್ನು ಒಕ್ಕೂಟದಿಂದ ಅಳವಡಿಸಲಾಗಿರುತ್ತದೆ.<br>ಸಂಘಗಳ ಹಂತದಲ್ಲಿ ಹಾಲು ಉತ್ಪಾದಕರುಗಳಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಲು ಒಕ್ಕೂಟದ ಪಶುವೈದ್ಯಾಧಿಕಾರಿಗಳು ಹಾಗೂ ಕ್ಷೇತ್ರ ಸಿಬ್ಬಂದಿಗಳ ಮೂಲಕ ಗ್ರಾಮ ಮಟ್ಟದಲ್ಲಿ ಶಿಬಿರಗಳನ್ನು ನಡೆಸಿ ಅರಿವು ಮೂಡಿಸುವ ಕಾರ್ಯವನ್ನು ಒಕ್ಕೂಟದಿಂದ ಮಾಡಲಾಗುತ್ತಿದೆ. |

**ಸಂ: ಪಸಂಮೀ 208 ಸಲೆವಿ 2018**

**(ವೆಂಕಟರಾವ್ ನಾಡಗೌಡ)**
**ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು**